ದಿನಾಂಕಃ 21-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ,

1) ನಾನು ಆರೋಪಿಗೆ ಹಣ ನೀಡಿದ್ದೇನೆ ಎಂದು ಹೇಳುವ ಸಮಯದಲ್ಲಿ ನನ್ನ ಬ್ಯಾಂಕಿನ ಖಾತೆಯಲ್ಲಿ ರೂ. 5 ಲಕ್ಷ ಇರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಮನೆಯಲ್ಲಿ ಇದ್ದ ಹಣವನ್ನು ಆರೋಪಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಖಾತೆಯಲ್ಲಿದ್ದ ಹಣವನ್ನು ಸಮಯಾನುಸಾರ ಹಿಂಪಡೆದಿರುತ್ತೇನೆ ಎಂದರೆ ಸರಿ. ನಿಶಾನೆ ಪಿ-8 ದಾಖಲೆಯಲ್ಲಿ ನಮೂದು ಇರುವ ಆಸ್ತಿ ನನ್ನ ತಾಯಿಯ ಹೆಸರಿನಲ್ಲಿ ಇರುತ್ತದೆ. ನಮ್ಮ ಕುಟುಂಬದ ನಿರ್ವಹಣೆ ಮತ್ತು ಖರ್ಚು ವೆಚ್ಚವನ್ನು ನಾನೇ ನೋಡಿಕೊಳ್ಳುತ್ತೇನೆ ಎಂದರೆ ಸರಿ. ನನ್ನ ತಾಯಿ ನನ್ನ ಜೊತೆ ಇರುತ್ತಾರೆ.

2) ನನ್ನ ತಾಯಿಯ ಹೆಸರಿನಲ್ಲಿರುವ ಆಸ್ತಿಗಳ ಮೇಲೆ ನನ್ನ ತಾಯಿ ಸಾಲ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ನಾನು ಮತ್ತು ನನ್ನ ತಾಯಿ ಒಟ್ಟಾಗಿ ಸಾಲ ಪಡೆದುಕೊಂಡಿರುತ್ತೇವೆ ಎಂದರೆ ಸಾಕ್ಷಿಯ ನಾನು ನನ್ನ ತಾಯಿ ಸರ್ಕಾರದಿಂದ ಬೆಳೆ ಪಡೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ನಿಶಾನೆ ಪಿ-9 ಆಸ್ತಿಯ ಮೇಲೂ ಸಹ ಸಾಲ ಪಡೆದುಕೊಂಡಿರುತ್ತೇವೆ ಎಂದರೆ ಸಾಕ್ಷಿಯು ನಾನು ಹಾಜರುಪಡಿಸಿರುವ ಎಲ್ಲ ಆಸ್ತಿಗಳ ಮೇಲೆ ಒಂದೇ ಸಾಲವನ್ನು ಪಡೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ.

3) ನಾನು ನಿಶಾನೆ ಪಿ-8 ಆಸ್ತಿಯ ಮೇಲೆ 2019-2020 ನೇ ಸಾಲಿನಲ್ಲಿ ಸಾಲ ಪಡೆದುಕೊಂಡಿರುತ್ತೇನೆ ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ಅದೇ ರೀತಿ ನಿಶಾನೆ ಪಿ-9 ಆಸ್ತಿಯ ಮೇಲೆ 2019-2020 ನೇ ಸಾಲಿನಲ್ಲಿ ಸಾಲ ಪಡೆದುಕೊಂಡಿರುತ್ತೇನೆ ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ನಿಶಾನೆ ಪಿ-11 ಆಸ್ತಿಯ ಮೇಲೆ 2023 ನೇ

ಸಾಲಿನಲ್ಲಿ ರೂ. 3,40,000/- ಸಾಲ ಪಡೆದುಕೊಂಡಿರುತ್ತೇನೆ ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ನಿಶಾನೆ ಪಿ-12 ಆಸ್ತಿಯ ಮೇಲೆ 2017-18 ನೇ ಸಾಲಿನಲ್ಲಿ ರೂ. 4,00,000/- ಸಾಲ ಪಡೆದುಕೊಂಡಿರುತ್ತೇನೆ ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ನಿಶಾನೆ ಪಿ-13 ಆಸ್ತಿಯ ಮೇಲೆ 2017-18 ನೇ ಸಾಲಿನಲ್ಲಿ ರೂ. 3,06,000/- ಸಾಲ ಪಡೆದುಕೊಂಡಿರುತ್ತೇನೆ ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ಸದರಿ ಸಾಲಗಳನ್ನು ನಾವು ತಿರುವಳಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಪ್ರತಿ ವರ್ಷ ತಿರುವಳಿ ಮಾಡಿ ಹೊಸ ಸಾಲವನ್ನು ಪಡೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ.

4) ನಾನು ಆಸ್ತಿಗಳ ಮೇಲೆ ಪ್ರತ್ಯೇಕವಾಗಿ ಸಾಲ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಾಲವನ್ನು ಮರುಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಲವನ್ನು ಮರುಪವಾತಿ ಮಾಡಿ ನವೀಕರಣ ಮಾಡಿದ ಬಗ್ಗೆ ದಾಖಲೆ ತೋರಿಸಲು ತೊಂದರೆ ಇರುವುದಿಲ್ಲ. ನಾನು ನನ್ನ ಪ್ರಕರಣದ ಅನುಕೂಲಕ್ಕಾಗಿ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ